ಆರ್.ಎ. ನಂ. **16/2024** ಪಿ.ಡಬ್ಲ್ಯೂ: **1**

**ದಿನಾಂಕಃ 18.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ :**

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿರುತ್ತವೆ ಮತ್ತು ಸಹಿ ನನ್ನದೇ ಇರುತ್ತದೆ.

**ಮುಂದುವರೆದ ಮುಖ್ಯವಿಚಾರಣೆ : ಮೇಲ್ಮನವಿದಾರರ ಪರ ವಕೀಲರಿಂದಃ**

1. ದೃಢೀಕೃತ ತೀರ್ಪಿನ ಪ್ರತಿಯನ್ನು ನಿಪಿ **1** ಎಂದು, ಡಿಕ್ರಿ ಪ್ರತಿಯನ್ನು ನಿಪಿ **2** ಎಂದು ಗುರುತಿಸಿತು.

**ಪಾಟೀಸವಾಲು : ಎದುರುದಾರರ ಪರ ಶ್ರೀ ಎಸ್.ಎಲ್.ಜಿ. ವಕೀಲರಿಂದಃ**

1. ನನ್ನ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ಗೊತ್ತಿದೆಯೇ ? ಎಂದರೆ ಗೊತ್ತಿಲ್ಲ. ಕೆಳಗಿನ ನ್ಯಾಯಾಲಯದಲ್ಲಿ ದಾವೆ ನಡೆಯುತ್ತಿರುವಾಗ ನಾನು ಹಾಜರಾಗಿದ್ದೇನೇ? ಎಂದರೆ ನನಗೆ ಪಾರ್ಸಿ ಹೊಡೆದಿದ್ದರಿಂದ ಹಾಜರಾಗಿರಲಿಲ್ಲ. ನನಗೆ ಕಣ್ಣು ಕಾಣುವುದಿಲ್ಲ. ನ್ಯಾಯಾಲಯವು ಸಾಕ್ಷಿಗೆ ಕಣ್ಣು ಕಾಣದೇ ಇರುವುದು ಮತ್ತು ಅವರ ಮಗ ಕೋರ್ಟಿಗೆ ಕೈ ಹಿಡಿದು ಒಳಕ್ಕೆ ಕರೆ ತಂದಿರುವುದನ್ನು ಗಮನಿಸಿರುತ್ತದೆ. ನನಗೆ ಓಡಾಡಲು ಮತ್ತು ಅಡ್ಡಾಡಲು ಬರುತ್ತದೆ ಎಂದರೆ ಸರಿ. ನನಗೆ ತಲೆಸುತ್ತು ಬರುತ್ತದೆ, ಎಲ್ಲಿಯಾದರೂ ಬಿದ್ದು ಬಿಡುತ್ತೇನೆ. ನನಗೆ ಜಾಂಡೀಸ್ ಕಾಯಿಲೆ ಇರಲಿಲ್ಲ. ಕಾಮಾಲೆ ಕಾಯಿಲೆ ಇತ್ತೇ? ಎಂದರೆ ಇರಲಿಲ್ಲ. ನನ್ನನ್ನು ನನ್ನ ಮಗನೇ ಸಂರಕ್ಷಣೆ ಮಾಡುವುದು ಮತ್ತು ನೋಡಿಕೊಳ್ಳುವುದು ಮಾಡುತ್ತಾನೆ ಎಂದರೆ ಸರಿ. ಈ ಕೋರ್ಟಿನ ಕೇಸಿನ ವಿಚಾರವನ್ನು ನನ್ನ ಮಗನೇ ನೋಡಿಕೊಳ್ಳುತ್ತಾನೆ ಎಂದರೆ ಸರಿ. ಕೆಳಗಿನ ಕೋರ್ಟಿನಲ್ಲಿ ತೀರ್ಪು ಬಂದ ನಂತರ ಏನಾಗಿದೆ ಎಂಬುದನ್ನು ನನ್ನ ಮಗ ನನಗೆ ಹೇಳಿದ್ದನು ಎಂದರೆ ಸರಿ. ನಾನು ತೀರ್ಪು ಬಂದ 669 ದಿನಗಳ ಕಾಲ ತಡವಾಗಿ ಈ ಅಪೀಲು ಸಲ್ಲಿಸಿದ್ದೇನೆ ಎಂದರೆ ಸರಿ. ಅದಕ್ಕಿಂತ ಮುಂಚೆ ಅಪೀಲು ಸಲ್ಲಿಸುವ ಅವಕಾಶ ಇದ್ದರೂ ನಾನು ಅಪೀಲು ಸಲ್ಲಿಸಿಲ್ಲ ಎಂದರೆ ಸರಿ. ಹುಷಾರಿಲ್ಲದೇ ಡಾಕ್ಟರ್ ಬಳಿ ಚಿಕಿತ್ಸೆ ಪಡೆದ ಬಗ್ಗೆ ದಾಖಲೆಗಳನ್ನು ಹಾಜರು ಮಾಡಿಲ್ಲ ಎಂದರೆ ಸರಿ. ನಾನು ಮನೆಯಲ್ಲಿ ಅಡ್ಡಾಡುತ್ತೇನೆ ಆದರೆ ಕೆಲಸ ಮಾಡಲು ಆಗುವುದಿಲ್ಲ. ನಾನು ಯಾವಾಗಲೂ ಹಾಸಿಗೆ ಹಿಡಿದು ಮಲಗಿರುವುದಿಲ್ಲ ಎಂದರೆ ಸರಿ. ನಾನು ಕಾಲ ವಿಳಂಬ ಮನ್ನಾ ಮಾಡಲು ಯಾವುದೇ ಸೂಕ್ತ ಕಾರಣಗಳನ್ನು ತೋರಿಸಿಲ್ಲ ಎಂದರೆ ಸರಿಯಲ್ಲ. ನಿಗದಿತ ಅವಧಿಯಲ್ಲಿ ಅಪೀಲು ಸಲ್ಲಿಸದೇ ಸುಳ್ಳು ಸಂಗತಿಗಳಿಂದ ಕೂಡಿದ ಅರ್ಜಿ ಸಲ್ಲಿಸಿ ಅದಕ್ಕೆ ಪೂರಕವಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ ವಾದಿಗೆ ಕಾಲವಿಳಂಬ ಮಾಡಿ ತೊಂದರೆ ನೀಡುವ ಉದ್ದೇಶದಿಂದ ಈ ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ. ಹಗರಿಬೊಮ್ಮನಹಳ್ಳಿ